

ಸೂರಿ ನಿರ್ದೇಶನದ 'ದೊಡ್ಮನೆ ಹುಡುಗ' ತೆರೆಕಾಣುವ ಸಿದ್ಧತೆಯಲ್ಲಿದ್ದರೆ, 'ಟಗರು' ಚಿತ್ರ ಮುಹೂರ್ತ ನಡೆಸಿದೆ. ತಮ್ಮನ ಚಿತ್ರದ ಬಳಿಕ ಅಣ್ಣನ ಸಿನಿಮಾ ಕೈಗೆತ್ತಿಕೊಂಡಿರುವ ಸೂರಿ ಅವರ ನಡೆ ಕುತೂಹಲಕರವಾಗಿದೆ.



# ಸೂರಿ ಯುಗಳ

ಗಾಂಧಿನಗರದಲ್ಲಿ ಸದ್ಯಕ್ಕೆ ಹೆಚ್ಚು ಸುದ್ದಿಯಲ್ಲಿರುವ ನಿರ್ದೇಶಕ ದುನಿಯಾ ಸೂರಿ. ಅವರ ನಿರ್ದೇಶನದ 'ದೊಡ್ಮನೆ ಹುಡುಗ' ತೆರೆಕಾಣುವ ದಿನ ಹತ್ತಿರುವಾಗುತ್ತಿರುವಂತೆ, ಚಿತ್ರದ ಬಗ್ಗೆ ಗಾಂಧಿನಗರದಲ್ಲಿ ನಿರೀಕ್ಷೆಗಳು ಹೆಚ್ಚುತ್ತಿವೆ. ಅದಕ್ಕೆ ತಕ್ಕಹಾಗೆ, ಚಿತ್ರದ ಪ್ರತಿ ಗೀತೆಯ ಬಿಡುಗಡೆ ಕಾರ್ಯಕ್ರಮಕ್ಕೆ ಹಬ್ಬದ ಕಳೆ ನೀಡುವ ಮೂಲಕ ಸೂರಿ ತಮ್ಮ ಚಿತ್ರದ ನಿರೀಕ್ಷೆಗಳನ್ನು ಹೆಚ್ಚಿಸಿದ್ದಾರೆ.

'ದೊಡ್ಮನೆ ಹುಡುಗ' ಸೂರಿ ಹಾಗೂ ಪುನೀತ್ ರಾಜಕುಮಾರ್ ಪಾಲಿಗೆ ಬಹು ಮಹತ್ವದ ಸಿನಿಮಾ. ಇಬ್ಬರ ಕಾಂಬಿನೇಷನ್‌ನ 'ಜಾಕಿ' ಸಿನಿಮಾ ಬಹುದೊಡ್ಡ ಗೆಲುವು ಕಂಡಿತ್ತು. ಆದರೆ, ಅದರ ಬೆನ್ನಿಗೆ ತೆರೆಕಂಡ 'ಅಣ್ಣಾಬಾಂಡ್' ನಿರೀಕ್ಷಿತ ಗೆಲುವನ್ನು ದಾಖಲಿಸಿರಲಿಲ್ಲ. ಹೀಗಾಗಿ, 'ದೊಡ್ಮನೆ ಹುಡುಗ'ನ ಗೆಲುವು ಈ ಜೋಡಿ ಮರಳಿ ಗೆಲುವಿನ ಹಳಿ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

ಪುನೀತ್ ಅವರ ಇತ್ತೀಚಿನ ಸಿನಿಮಾ 'ಚಕ್ರವ್ಯೂಹ' ಸದ್ದೇ ಇಲ್ಲದೆ ಚಿತ್ರಮಂದಿರಗಳಿಂದ ಕಣ್ಮರೆಯಾಗಿತ್ತು. 'ಚಕ್ರವ್ಯೂಹ' ಸೇರಿದಂತೆ, ಇತ್ತೀಚಿನ ದಿನಗಳಲ್ಲಿ ಬೇರೆ ಭಾಷೆಯ ನಿರ್ದೇಶಕರ ಚಿತ್ರಗಳಲ್ಲಿ ಪುನೀತ್ ಅಭಿನಯಿಸಿದಾಗಲೆಲ್ಲ ಅವರು ನಿರಾಶರಾಗಿರುವುದೇ ಹೆಚ್ಚು. ಈ ಹಿನ್ನೆಲೆಯಲ್ಲಿ ಕನ್ನಡದ್ದೇ ನಿರ್ದೇಶಕನ ಚಿತ್ರ ಪುನೀತ್‌ಗೆ ದೊಡ್ಡ ಗೆಲುವು ತಂದುಕೊಡಬಹುದು ಎನ್ನುವ ನಿರೀಕ್ಷೆಯೂ ಇದೆ.

ಬಜೆಟ್ ದೃಷ್ಟಿಯಿಂದಲೂ 'ದೊಡ್ಮನೆ ಹುಡುಗ' ಕನ್ನಡದ ಅದ್ದೂರಿ ಚಿತ್ರಗಳಲ್ಲೊಂದು ಎನ್ನಿಸಿಕೊಂಡಿದೆ. ನಾಡಿನ ವಿವಿಧ ಭಾಗಗಳಲ್ಲಿ ಚಿತ್ರೀಕರಿಸಿರುವ – 'ಅಭಿಮಾನಿಗಳೆ ನಮ್ಮನೆ ದೇವ್ರು' ಎನ್ನುವ ಗೀತೆಯ ಚಿತ್ರೀಕರಣಕ್ಕೆ ಕೋಟ್ಯಂತರ ರೂಪಾಯಿ ಖರ್ಚು ಮಾಡಲಾಗಿದೆ. ಈ ಗೀತೆಯ ಜೊತೆಗೆ ಚಿತ್ರದ ಉಳಿದ ಗೀತೆಗಳು ಕೂಡ ಈಗಾಗಲೇ ಚಿತ್ರರಸಿಕರ ಗಮನಸೆಳೆದಿವೆ.

ಒಂದೆಡೆ 'ದೊಡ್ಮನೆ ಹುಡುಗ'ನನ್ನು ತೆರೆಕಾಣಿಸುವ ಕೊನೆಯ ಹಂತದ ಸಿದ್ಧತೆ ನಡೆಸುತ್ತಿರುವ ಸೂರಿ, ಇನ್ನೊಂದೆಡೆ 'ಟಗರು' ಚಿತ್ರದ ಮುಹೂರ್ತ ನಡೆಸಿದ್ದಾರೆ. ಶಿವರಾಜ್‌ಕುಮಾರ್ ನಾಯಕರಾಗಿ ನಟಿಸುತ್ತಿರುವ 'ಟಗರು' ಚಿತ್ರದ ವಿಶಿಷ್ಟ ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಮಾಡಿವೆ. ಅಂದಹಾಗೆ, 'ಮೈಯೆಲ್ಲ ಪೊಗರು' ಎನ್ನುವುದು 'ಟಗರು' ಶೀರ್ಷಿಕೆಯ ಅಡಿಟಿಪ್ಪಣಿ.

'ಕಡ್ಡಿಪುಡಿ' ಚಿತ್ರದಲ್ಲಿ ಶಿವರಾಜ್‌ಕುಮಾರ್ ಅವರನ್ನು ವಿಭಿನ್ನವಾಗಿ ತೋರಿಸಿದ್ದ ಸೂರಿ, ಈಗ 'ಟಗರು' ಮೂಲಕ ರೌಡಿಸಂ ಕಥೆಯ ಹೊಸ ಚಿತ್ರ ಮಾಡುತ್ತಿದ್ದಾರೆ. 'ಈ ಚಿತ್ರದಲ್ಲಿ ರೌಡಿಸಂನ ಅತಿರೇಕಗಳಿರುವುದಿಲ್ಲ. ಈವರೆಗಿನ ಚಿತ್ರಗಳಲ್ಲಿ ಕಾಣಿಸಿರುವ ರೌಡಿಸಂನ ಹೊಸ ವರ್ಷನ್ ನಮ್ಮ ಚಿತ್ರದಲ್ಲಿ ಇರಲಿದೆ. ಚಿತ್ರಕಥೆ ವಿಭಿನ್ನವಾಗಿದೆ. ಕನ್ನಡದಲ್ಲಿ ಶಿವಣ್ಣನನ್ನು ಹೊರತುಪಡಿಸಿ ಈ ಚಿತ್ರದ ನಾಯಕನ ಪಾತ್ರದಲ್ಲಿ ಬೇರೆ ಯಾರನ್ನೂ ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ' ಎಂದು ಸೂರಿ ಹೇಳಿರುವುದು ಕೂಡ 'ಟಗರು' ಬಗ್ಗೆ ನಿರೀಕ್ಷೆಗಳನ್ನು ಮೂಡಿಸಿದೆ.

'ಕೆಂಡಸಂಪಿಗೆ' ಮೂಲಕ ಗಾಂಧಿನಗರಕ್ಕೆ ಪರಿಚಯಗೊಂಡಿದ್ದ ಮಾನ್ವಿತಾ ಹರೀಶ್ 'ಟಗರು' ಚಿತ್ರದ ನಾಯಕಿ. ಎರಡನೇ ಚಿತ್ರದಲ್ಲೇ ಶಿವಣ್ಣನಂಥ ದೊಡ್ಡ ಹೀರೊ ಜೊತೆ ನಟಿಸುತ್ತಿರುವ ಪುಲಕ ಅವರದು.

■ ರಘು